ದಿ:16.03.2022 OS.No. 164/2017 PW-1

ದಿ:16.03.2022 ರಂದು ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಪಿ ಎಲ್ ಎನ್ ವಕೀಲರಿಂದಃ**

ನಾನು ವಿದ್ಯಾಬ್ಯಾಸ ಮಾಡಿರುವುದಿಲ್ಲ. ನಾನು ಸಮಾರು *20* ವರ್ಷಗಳಿಂದ ಅರ್ಚಕರ ಹಳ್ಳಿ ರಾಮನಗರದಲ್ಲಿ ವಾಸವಿದ್ದೇವೆ. ನನ್ನ ತಮ್ಮನಾದ *2* ನೇ ವಾದಿಯು ಸುಮಾರು *25* ವರ್ಷಗಳಿಂದ ಬೆಂಗಳೂರಿನ ಕೋಣನ ಕುಂಟೆಯಲ್ಲಿ ವಾಸವಾಗಿದ್ದಾನೆ. ನನ್ನ ತಂಗಿಯಾದ *3* ನೇ ವಾದಿ ಸುಶೀಲಮ್ಮನವರನ್ನು ಸುಮಾರು *30* ವರ್ಷಗಳ ಹಿಂದೆ ದೊಡ್ಡ ಮಳೂರಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ನನ್ನ ತಂಗಿಯಾದ *4* ನೇ ವಾದಿ ಚಿಕ್ಕತಾಯಮ್ಮ ರವರನ್ನು ಸುಮಾರು *26* ವರ್ಷಗಳ ಹಿಂದೆ ಕೊಟ್ಟು ವಿವಾಹ ಮಾಡಲಾಗಿತ್ತು. ನೀವು ಶೆಟ್ಟಿಹಳ್ಳಿ ವಾಸವಿದ್ದೀರಾ ಎಂದರೆ ನಾನು ಸಿದ್ದಮ್ಮ ಎಂಬುವವರ ಮನೆಯಲ್ಲಿ ಜೀತಕ್ಕೆ ಇದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ನಾನು ಸಿದ್ದಮ್ಮರವರ ಬಳಿ ಜೀತಕ್ಕೆ ಇದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ನನ್ನ ತಾಯಿಯ ಹೆಸರು ದೊಡ್ಡಮ್ಮ. ನಮ್ಮ ತಾಯಿಯ ಅಕ್ಕ ಪುಟ್ಟ ಸಿದ್ದಮ್ಮನವರೇ ಹಿರಿಯರು. ನಾನು *16* ವರ್ಷ ವಯಸ್ಸಿನಲ್ಲಿದ್ದಾಗ ಶೆಟ್ಟಿಹಳ್ಳಿಗೆ ಹೋಗಿದ್ದು. ನಾನು ನಮ್ಮ ಚಿಕ್ಕಮ್ಮನಾದ ಪುಟ್ಟಸಿದ್ದಮ್ಮನವರ ಮನೆಯಲ್ಲಿ ಇದ್ದೆ ಎಂದರೆ ಸರಿ. ಶೆಟ್ಟಿಯಲ್ಲಿ ನಿಮ್ಮ ದೊಡ್ಡಮ್ಮ ದತ್ತು ತೆಗೆದುಕೊಂಡಿದ್ದರು ಎಂದರೆ ಸಾಕ್ಷಿ ನಾನು ಜೀತಕ್ಕೆ ಇದ್ದೆ ಎಂದು ನುಡಿಯುತ್ತಾರೆ. ನಾನು ಸುಮಾರು *10* ವರ್ಷ ಶೆಟ್ಟಿಹಳ್ಳಿಯಲ್ಲಿ ವಾಸವಿದ್ದೆ. ನಂತರ ಮಿಣಕೆರೆ ದೊಡ್ಡಿಯಲ್ಲಿ ವಾಸವಾಗಿದ್ದೆ. ನನ್ನ ವಿವಾಹ ಶೆಟ್ಟಿಹಳ್ಳಿಯಲ್ಲಿ ಇದ್ದಾಗ ಆಗಿತ್ತು. ನಾನೇ ನಮ್ಮ ದೊಡ್ಡಮ್ಮನವರ ಜಮೀನನ್ನು ನೋಡಿಕೊಳ್ಳುತ್ತಿದ್ದೆ. ನಮ್ಮ

ದೊಡ್ಡಮ್ಮನವರು ನನ್ನನ್ನು ದತ್ತು ಪಡೆದಿದ್ದರು ಎಂದರೆ ಸುಳ್ಳು. ನಾನು ಮಿಣಕೆರೆದೊಡ್ಡಿ ಹೋಗಿಲ್ಲ ಎಂದರೆ ಸುಳ್ಳು. ನಾನು ಮಿಣಕೆರೆದೊಡ್ಡಿಯಲ್ಲಿ ವಾಸವಾಗಿದ್ದೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಅರ್ಚಕರ ಹಳ್ಳಿಯಲ್ಲಿ ನಾನು ಸ್ವಂತ ಮನೆಯಲ್ಲಿ ವಾಸವಾಗಿದ್ದೇನೆ. ಅದನ್ನು ಬಿಟ್ಟು ಬೇರೆ ಯಾವುದೇ ಅಸ್ತಿಗಳು ಇಲ್ಲ. ಅರ್ಚಕರ ಹಳ್ಳಿಯಲ್ಲಿ ಇರುವ ಮನೆಯನ್ನು ದಾವಾ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಈ ದಾವೆಯನ್ನು ನಾನು ಭೂಮಿಯಲ್ಲಿ ಭಾಗ ಬೇಕೆಂದು ದಾವೆ ಸಲ್ಲಿಸಿರುತ್ತೇನೆ. ಸದರಿ ದಾವೆ ಸಲ್ಲಿಸುವಾಗ ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ಅರ್ಚಕರ ಹಳ್ಳಿಯಲ್ಲಿರುವ ಮನೆಯ ಬಗ್ಗೆ ಮಾಹಿತಿ ನೀಡಿಲು ತೊಂದರೆ ಇತ್ತೇ ಎಂದರೆ ಸಾಕ್ಷಿ ಮೌನವಾಗಿದ್ದರು. 2ನೇವಾದಿಯಾದ ನನ್ನ ತಮ್ಮ ಚಲ್ಲಯ್ಯ ಬೆಂಗಳೂರಿನಲ್ಲಿ ಸ್ವಂತ ಮನೆಯಲ್ಲಿ ವಾಸವಾಗಿದ್ದಾನೆ. ಅವರಿಗೆ ಬೇರೆ ಯಾವುದೇ ಅಸ್ತಿ ಇರುವುದಿಲ್ಲ. 2ನೇ ವಾದಿ ಕೋಡೇಸ್ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ನಾನು 2006ರಿಂದ ರೇಷ್ಮೆ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಅಧಾರ್ ಕಾರ್ಡ್ ಅರ್ಚಕರ ಹಳ್ಳಿಯ ವಿಳಾಸದಲ್ಲಿ ಇದೆ. ಅರ್ಚಕರ ಹಳ್ಳಿಯಲ್ಲಿರುವ ಮನೆ ನನ್ನ ಹೆಂಡತಿಯ ಹೆಸರಿನಲ್ಲಿ. ಮುಂದುವರೆದು ಮನೆಯನ್ನು ನಾನೇ ಖರೀದಿಸಿ ನನ್ನ ಹೆಂಡತಿಯ ಹೆಸರಿಗೆ ಖಾತೆ ಮಾಡಿಸಿರುತ್ತೇನೆ. ಅದಕ್ಕೆ ವಿದ್ಯುತ್ ತೆರಿಗೆ ಪಾವತಿ ಮತ್ತು ನೀರಿನ ಶುಲ್ಕವನ್ನು ಬೇರೆ ಬೇರೆಯಾಗಿ ಪಾವತಿ ಮಾಡುತ್ತಿದ್ದೇನೆ ಎಂದರೆ ಸರಿ. 2ನೇ ವಾದಿ ನನ್ನ ತಮ್ಮ ಸಹ ಮನೆಯನ್ನು ಅವನೇ ಖರೀದಿ ಮಾಡಿ ಅವನ ಹೆಂಡತಿಯ ಹೆಸರಿಗೆ ಮಾಡಿರುತ್ತಾನೆ. ಅವರ ಆದಾರ್ ಕಾರ್ಡ್ ನಲ್ಲಿ ಇರುವ ವಿಳಾಸ ಬೆಂಗಳೂರಿನದು ಅಗಿರುತ್ತದೆ. ಅದಕ್ಕೆ ವಿದ್ಯುತ್ ತೆರಿಗೆ ಪಾವತಿ ಮತ್ತು ನೀರಿನ ಶುಲ್ಕವನ್ನು ಬೇರೆ ಬೇರೆಯಾಗಿ ಪಾವತಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ತಮ್ಮ 2ನೇ

ವಾದಿ ಖರೀದಿ ಮಾಡಿದ ಮನೆಯನ್ನು ದಾವಾ ಸ್ವತ್ತಿನಲ್ಲಿ ಸೇರಿಸಿಲ್ಲ ಎಂದರೆ ಸರಿ. ಮಿಣಕೆರದೊಡ್ಡಿಯಲ್ಲಿರುವ ಅಸ್ತಿ ನನ್ನ ಅಣ್ಣನಾದ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇದೆ. ಹಿಂದೆ ನಮ್ಮ ತಾತನ ಹೆಸರಿನಲ್ಲಿ ಖಾತೆ ಇತ್ತು. ನಮ್ಮ ತಾತನ ಹೆಸರು ಕೆಂಪಯ್ಯ. ನಮ್ಮ ತಾತನ ಹೆಸರಿನಲ್ಲಿ ಖಾತೆ ಇತ್ತು ಎಂದು ತೋರಿಸಲು ನ್ಯಾಯಾಲಯದ ಮುಂದೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಅದನ್ನು ನಿಪಿ-*2* ಎಂದು ಗುರುತಿಸಲಾಗಿದೆ. *2012-13* ನೇಲ ಸಾಲಿನಲ್ಲಿ ಕೃಷಿ ಪತ್ತಿನ ಸಹಾಕಾರ ಸಂಘ ಮತ್ತಿಕೆರೆಯಲ್ಲಿ ಸಾಲ ಪಡೆದಿದ್ದರು ಎಂದರೆ ಸರಿ. *2012-13* ರಲ್ಲಿ ನನ್ನ ಅಣ್ಣ ಸಾಲ ತೆಗೆದುಕೊಂಡಿದ್ದ ವಿಚಾರ ನನಗೆ ಗೊತ್ತಿಲ್ಲ. ದಾವೆಯನ್ನು ಹೂಡುವ ಸಮಯದಲ್ಲಿಯೇ ನನಗೆ ಪ್ರತಿವಾದಿ ಸಾಲ ಪಡೆದಿರುವ ಬಗ್ಗೆ ನನಗೆ ಗೊತ್ತಾಗಿದ್ದು. ನಾನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಇ ಸಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಬದಲಾವಣೆ ಮ್ಯುಟೇಷನ್ ನನ್ನು ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. ಈಗಾಗಲೇ ನಿಪಿ-*1* ಎಂದು ಗುರುತಿಸಲಾದ ವಂಶವೃಕ್ಷದಲ್ಲಿ ನಾವು ಎಂಟು ಜನ ಇದ್ದೇವೆ. ನಿಪಿ-*1* ರ ಪ್ರಕಾರ *13* ಜನ ಇದ್ದೀರಾ ಎಂದರೆ ಸರಿ.

ನಿಪಿ-*1* ರಲ್ಲಿ *10* ನೇ ಕುಂಟಕಯ್ಯ ನನ್ನ ಚಿಕ್ಕಪ್ಪನಾಗಬೇಕು. *11* ನೇ ದೊಡ್ಡದೈಯ್ಯ ನನ್ನ ಚಿಕ್ಕಪ್ಪ. *13* ನೇ ಜಯಲಕ್ಷಮ್ಮಮ್ಮ ನನ್ನ ಚಿಕ್ಕಪ್ಪನ ಮಗಳು. ಈ ಮೂವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿ. ನಿಪಿ-*1* ಒಕ್ಕಣೆಯನ್ನು ನಾನೇ ಹೇಳಿ ಬರೆಸಿದ್ದೇನೆ. ವಾದಿ *3* ಮತ್ತು *4* ರವರ ವಿವಾಹವನ್ನು ನಮ್ಮ ಅಣ್ಣನವರೇ ಮಾಡಿರುತ್ತಾರೆ ಸಾಕ್ಷಿ ಮುಂದುವರೆದ ನಾನು ಸಹ ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿದಂತೆ ನಾನು ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಡಿಪಸಿರುವುದಿಲ್ಲ.

ವಾದಿ 3 ಮತ್ತು 4ರವರ ಬಾಣಂತನವನ್ನು ನಮ್ಮ ಅಣ್ಣನವರೇ ಮಾಡಿರುತ್ತಾರೆ ಸಾಕ್ಷಿ ಮುಂದುವರೆದ ನಾನು ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ. ವಾದಿ 3 ಮತ್ತು 4ರವರ ಸೀಮಂತ ಮತ್ತು ಮಕ್ಕಳ ನಾಮಕರಣವನ್ನು ಮಾಡಲು ಹಣ ನೀಡಿರುವುದರ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ. 3 ಮತ್ತು 4ನೇ ವಾದಿಯವರು ಮದುವೆ, ಸೀಮಂತ, ಬಾಣಂತನ ಮತ್ತು ನಾಮಕರಣವನ್ನು ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ನೇ ವಾದಿ 15ನೇ ವರ್ಷದಲ್ಲಿಯೇ ಮನೆ ಬಿಟ್ಟು ಹೋಗಿದ್ದರು ಎಂದರೆ ಸಾಕ್ಷಿ ಅವರನ್ನು ನಮ್ಮ ಅಣ್ಣಂದಿರು ಹೊಡೆದು ಓಡಿಸಿಬಿಟ್ಟದ್ದರು ಎಂದು ನುಡಿಯುತ್ತಾರೆ. ಇದರ ಸಂಬಂಧವಾಗಿ ಯಾವುದೇ ದೂರು ದಾಖಲಿಸಿರುವುದಿಲ್ಲ. ಆದಾದನಂತರ 2ನೇ ವಾದಿ ಅವರಿಗೆ 27 ವರ್ಷ ವಯಸ್ಸಿದ್ದಾಗ ವಾಪಸ್ಸು ಬಂದಿರುತ್ತಾರೆ ಎಂದರೆ ಸರಿ. 2ನೇ ವಾದಿಯ ಮದುವೆಯನ್ನು ಸಹ ನನ್ನ ಅಣ್ಣ ಪ್ರತಿವಾದಿಯೇ ಮಾಡಿದ್ದು ಅವರ ವಿವಾಹದ ನಂತರ ಅವರು ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ನಾನು ಅಥವಾ ನನ್ನ ತಮ್ಮನಾದ 2ನೇ ವಾದಿ ಮಿಣಕೆರೆ ದೊಡ್ಡಿಯಲ್ಲಿ ವಾಸವಾಗಿಲ್ಲ ಎಂದರೆ ಸುಳ್ಳು. 2ನೇ ವಾದಿಯಿಂದ 4ನೇ ವಾದಿ ವರೆಗೆ ಮದುವೆ, ಬೇರೆ ಖರ್ಚುಗಳೆಲ್ಲವನ್ನು ನನ್ನ ಅಣ್ಣನೇ ಮಾಡಿದ್ದರಿಂದ ನಾವುಗಳೆಲ್ಲ ಸೇರಿ 1ನೇ ಪ್ರತಿವಾದಿಗೆ ಆಸ್ತಿಯನ್ನು ಬಿಟ್ಟು ಕೊಟ್ಟಿವು ಎಂದರೆ ಸುಳ್ಳು. ನಮ್ಮ ತಂದೆಯವರು ಮೃತಪಟ್ಟನಂತರ 1ನೇ ಪ್ರತಿವಾದಿಯವರೇ ಜಮೀನೆಲ್ಲವನ್ನು ಅವರೇ ವ್ಯವಸಾಯ ಮಾಡಿಕೊಂಡು ಬಂದಿರುತ್ತಾರೆ ಮತ್ತು ಎಲ್ಲರು ಒಟ್ಟು ಕುಟುಂಬದಲ್ಲಿ ಇಲ್ಲ ಎಂದರೆ ಸುಳ್ಳು. ಅರ್ಚಕರ ಹಳ್ಳಿಯಲ್ಲಿ ನಾನು ಮತ್ತು ಬೆಂಗಳೂರಿನಲ್ಲಿ 2ನೇ ಪ್ರತಿವಾದಿ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದರೆ ಸರಿ. ನಾವೆಲ್ಲರೂ ಒಟ್ಟು ಕಜುಟಂಬದಲ್ಲಿ ಇಲ್ಲ ಮತ್ತು ಸುಮಾರು 25-30 ವರ್ಷಗಳಿಂದ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದರೆ ಸಾಕ್ಷಿ ನಾವು

ಎಲ್ಲ ಒಟ್ಟು ಕುಟುಂಬದಲ್ಲಿಯೇ ಇದ್ದೇವೆ ಎಂದು ನುಡಿಯುತ್ತಾರೆ. *3* ಮತ್ತು *4*ನೇ ವಾದಿಯರು ಮದುವೆಯಾದ ಕಾಲದಿಂದಲೂ ಅವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ನಾವೆಲ್ಲ ಪ್ರತ್ಯೇಕವಾಗಿ ವಾಸವಿದ್ದರು ಸಹ ನಮ್ಮ ವಕೀಲರಿಗೆ ಸುಳ್ಳು ಮಾಹಿತಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಮಗೆ ಭಾಗ ಆಗಿದ್ದು ಸತ್ಯಾಂತ ಗೊತ್ತಿದ್ದರು ಸಹ ಸುಳ್ಳು ಸಾಕ್ಷ್ಯ ನೀಡುತ್ತಿದ್ದೇನೆ ಎಂದರೆ ಸುಳ್ಳು. ನಾನು ಸುಳ್ಳು ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು *2*ನೇ ವಾದಿಯ ಹೆಸರಿನಲ್ಲಿರುವ ಆಸ್ತಿಯನ್ನು ಹೊರತು ಪಡಿಸಿ ಪ್ರತಿವಾದಿಯ ಹೆಸರಿನಲ್ಲಿರುವ ಅಸ್ತಿಯಲ್ಲಿ ಮಾತ್ರ ಭಾಗ ಕೇಳುತ್ತಿದ್ದೀರಾ ಎಂದರೆ ಸಾಕ್ಷಿ ನಮ್ಮ ತಾತನ ಹೆಸರಿನಲ್ಲಿರುವ ಅಸ್ತಿಯಲ್ಲಿ ಮಾತ್ರ ನಾವು ಭಾಗ ಕೇಳುತಿತದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತಿನಲ್ಲಿ ಪ್ರತ್ಯೇಕವಾಗಿ ಸ್ವಾದೀನ ಅಥವಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವೆಲ್ಲ ಸೇರಿ ಪ್ರತಿವಾದಿಯ ಅಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ಈ ದಾವವೆಯನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಓ

ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ ಚನ್ನಪಟ್ಟಣ